# ಬಿಡುಗಡೆಯ ಹಾದಿಯ ದಂಡನಾಯಕಿ

■ ಪ್ರವೀಣ ಕುಲಕರ್ಣಿ

ಈ ಊರಿನ ಮಹಿಳೆಯರನ್ನು ಜಗತ್ತಿನ ಎಲ್ಲ ಸೆಲೆಬ್ರಿಟಿಗಳಿಗಿಂತ ಎತ್ತರದ ಸ್ಥಾನದಲ್ಲಿಟ್ಟು ನೋಡಬಹುದು. ಇವರನ್ನೆಲ್ಲ ಸ್ತ್ರೀ ಸಂಕುಲದ ಆತ್ಮವಿಶ್ವಾಸದ ಪ್ರತೀಕವನ್ನಾಗಿಯೂ ಕಾಣಬಹುದು. ಈ ಪುಟ್ಟ ಊರು ಇರುವುದು ಸಿರಿಯಾದಲ್ಲಿ. ಯುದ್ಧ ಸಂತ್ರಸ್ತ ಕುಟುಂಬಗಳಿಂದ ಬಂದ ಮತ್ತು ಕೌಟುಂಬಿಕ ದೌರ್ಜನ್ಯದಿಂದ ನಲುಗಿದ ಹೆಣ್ಣುಮಕ್ಕಳು ಒಟ್ಟಾಗಿ ಈ ಊರನ್ನು ಕಟ್ಟಿದ್ದಾರೆ. ಅದಕ್ಕೆ ಜಿನ್ವಾರ್ ಎಂಬ ಹೆಸರನ್ನೂ ಇಟ್ಟಿದ್ದಾರೆ. ಕುರ್ದಿಶ್ ಭಾಷೆಯಲ್ಲಿ ಜಿನ್ವಾರ್ ಎಂದರೆ 'ಮಹಿಳೆಯರ ತಾಣ' ಎಂದರ್ಥ. ಜಗತ್ತಿನ ಸಂತಸದ ನೆಲೆಗಳಲ್ಲಿ ಈ ಊರೂ ಕೂಡ ಒಂದಂತೆ.

ಮದುವೆಯ ಬಳಿಕ ಕೌಟುಂಬಿಕ ದೌರ್ಜನ್ಯದಿಂದ ನಲುಗಿದ ರೊಕಾನ್ ಯೂಸಫ್ ಎಂಬ ಗಟ್ಟಿಗಿತ್ತಿಯೂ ಜಿನ್ವಾರ್ ಹುಡುಕಿಕೊಂಡು ಬಂದರು. ಅಲ್ಲಿನ ಬೇಕರಿಯಲ್ಲಿ ಕೆಲಸ ಮಾಡುವ ಅವರು, ಕೃಷಿಭೂಮಿಯನ್ನು ಹೇಗೆ ಉಳುಮೆ ಮಾಡಬೇಕು ಎಂಬ ವಿಷಯವಾಗಿ ತರಬೇತಿ ನೀಡುವ ಕೆಲಸವನ್ನೂ ಮಾಡುತ್ತಿದ್ದಾರೆ.

'ಮದುವೆಯಾದ ಬಳಿಕ ಮನೆಗೆಲಸಕ್ಕೆ ಮಾತ್ರ ನನ್ನನ್ನು ಸೀಮಿತಗೊಳಿಸಲಾಗಿತ್ತು. ಅಲ್ಲದೆ, ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿತ್ತು. ಇಂತಹ ವಾತಾವರಣದಲ್ಲಿ ನನಗೆ ಹೆಚ್ಚು ದಿನ ಅಲ್ಲಿ ಉಳಿಯುವುದು ಸಾಧ್ಯವಾಗಲಿಲ್ಲ. ಹೀಗಾಗಿ ಮನೆ ತೊರೆದು ಮಹಿಳೆಯರ ಊರಿಗೆ ಬಂದುಬಿಟ್ಟೆ. ಇಲ್ಲಿ ಬಂದಮೇಲೆ ನಾನು ಬಲಿಷ್ಠಳಾಗಿದ್ದೇನೆ ಎಂಬ ಭಾವ ಮೂಡಿದೆ. ಆತ್ಮವಿಶ್ವಾಸವೂ ಹೆಚ್ಚಿದೆ. ಬೆಳಿಗ್ಗೆ ಎದ್ದೊಡನೆ ಎಲ್ಲ ಮಹಿಳೆಯರು ಒಟ್ಟಾಗಿ ಕೆಲಸಕ್ಕೆ ತೆರಳುತ್ತೇವೆ. ಕೃಷಿಭೂಮಿಯಲ್ಲಿ ಉಳುಮೆ ಮಾಡುತ್ತೇವೆ. ಜೀವನ ಸುಂದರವಾಗಿದೆ. ಸಹಜೀವನ ಖುಷಿಕೊಟ್ಟಿದೆ' ಎಂದು ರೊಕಾನ್ ಹೇಳುತ್ತಾರೆ.

ಜಿನ್ವಾರ್‌ನಲ್ಲಿ ಯಾವುದೇ ಮಹಿಳೆಯನ್ನು ತಡೆದು ನಿಲ್ಲಿಸಿದರೂ ಇಂತಹದ್ದೇ ಒಂದೊಂದು ಯಶೋಗಾಥೆ ತೆರೆದುಕೊಳ್ಳುತ್ತದೆ. ಅವರ ಕಥೆ ಕೇಳುತ್ತಾ ಹೋದಂತೆ ಎದುರಿಗೆ ಇದ್ದವರ ಆತ್ಮವಿಶ್ವಾಸವೂ ತಟ್ಟನೆ ಎದ್ದು ನಿಲ್ಲುತ್ತದೆ. ಈ ಊರನ್ನು ಕೋವಿಡ್ ಅಟ್ಟಹಾಸ ಶುರುವಾಗುವ ಮುನ್ನ, ಅಂದರೆ 2018ರಲ್ಲಿ, ನಿರ್ಮಿಸಲಾಗಿದೆ. ಒಟ್ಟಾರೆ 30 ಮನೆಗಳಿದ್ದು, ಈಗ 20 ಮಹಿಳಾ ಕುಟುಂಬಗಳು ಇಲ್ಲಿ ವಾಸವಾಗಿವೆ. ಮಹಿಳೆಯರು ಮತ್ತು ಮಕ್ಕಳು ಮಾತ್ರ ಈ ಊರಲ್ಲಿ ವಾಸಿಸಬಹುದಾಗಿದೆ.

ಯಾಸ್ಮಿನ್ ಅಹ್ಮದ್ ಎಂಬ ಇನ್ನೊಬ್ಬ ಮಹಿಳೆಯೂ ಇಲ್ಲಿದ್ದಾರೆ. ಅವರ ಜತೆಗೊಂದು ಪುಟ್ಟ ಕೂಸಿದೆ. ದೌರ್ಜನ್ಯ ಎಸಗುತ್ತಿದ್ದ ಗಂಡನಿಂದ ಡೈವೋರ್ಸ್ ಪಡೆದ ಮೇಲೆ ಅವರ ಕಣ್ಮುಂದೆ ಬಂದಿದ್ದು ಇದೇ ಊರು. ಯಾಸ್ಮಿನ್ ಇಲ್ಲಿಗೆ ಬಂದು ಈಗ 15 ತಿಂಗಳಾಗಿವೆ. ನೆಮ್ಮದಿಯ ಬದುಕು ಅವರದಾಗಿದೆ.

ಜಿನ್ವಾರ್‌ನಲ್ಲಿ ಒಂದು ಶಾಲೆಯೂ ಇದೆ. ತರಬೇತಿ ಸಂಸ್ಥೆಯನ್ನೂ ಶುರುಮಾಡಲಾಗಿದೆ. ಮಹಿಳೆಯರು ದಿನವಿಡೀ ಕಷ್ಟಪಟ್ಟು ದುಡಿಯುತ್ತಾರೆ. ಸಂಜೆ ಆಯಿತೆಂದರೆ ಹಾಡುತ್ತಾ, ನೃತ್ಯ ಮಾಡುತ್ತಾ ಕಾಲ ಕಳೆಯುತ್ತಾರೆ. ಬದುಕಿನ ಆಶಾವಾದವನ್ನೇ ಕಳೆದುಕೊಂಡು ಆತ್ಮಹತ್ಯೆಗೆ ಯೋಚಿಸಿದವರೂ ಇಲ್ಲಿಗೆ ಬಂದ ಬಳಿಕ ಹೊಸ ಮನುಷ್ಯರಾಗಿ ಬದಲಾಗಿದ್ದಾರೆ. ತಮ್ಮಂತೆ ಅಸಹಾಯಕ ಸ್ಥಿತಿಯಲ್ಲಿ ಇರುವವರಿಗೂ ಸಹಾಯಹಸ್ತ ಚಾಚುವ ವಿಶಾಲ ಹೃದಯವನ್ನೂ ಹೊಂದಿದ್ದಾರೆ.

'ಹಿಂದು ಮತ್ತು ಇಂದಿನ ನನ್ನ ವ್ಯಕ್ತಿತ್ವದಲ್ಲಿ ಅಸಾಧಾರಣ ಬದಲಾವಣೆಗಳಾಗಿವೆ. ನನಗೀಗ ಗುರಿ ಇದೆ. ಸಾಧಿಸುವ ಛಲವೂ ಮೈಗೂಡಿದೆ. ನನ್ನ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬ ಅರಿವೂ ಮೂಡಿದೆ. ಯಾರ ಮಧ್ಯಸ್ಥಿಕೆಗೆ ಅವಕಾಶವಿಲ್ಲದೆ, ಯಾರ ನಿಯಂತ್ರಣಕ್ಕೂ ಒಳಪಡದೆ ಸ್ವಾವಲಂಬನೆಯ ಬದುಕನ್ನು ಸಾಧ್ಯವಾಗಿಸಿಕೊಂಡಿದ್ದೇನೆ. ನನ್ನ ಮಗಳನ್ನೂ ಹೀಗೇ ಬೆಳೆಸಲಿದ್ದೇನೆ' ಎಂದೆನ್ನುವ ಯಾಸ್ಮಿನ್ ಕಣ್ಣುಗಳಲ್ಲಿ ಅದೆಂತಹ ಆತ್ಮವಿಶ್ವಾಸ!

ರೊಕಾನ್, ಈ ಗ್ರಾಮದ ಮುಖ್ಯಸ್ಥೆ. ಎಲ್ಲ ಮಹಿಳೆಯರ ಯೋಗಕ್ಷೇಮದ ಹೊಣೆಯನ್ನೂ ಅವರು ಹೊತ್ತಿದ್ದಾರೆ. 'ನಾಗರಿಕ ಸಂಘರ್ಷಗಳಲ್ಲಿ ಯಾವಾಗಲೂ ಸಂತ್ರಸ್ತರಾಗುವುದು ಮಹಿಳೆಯರು ಮತ್ತು ಮಕ್ಕಳು. ಆದರೆ, ಅವರ ಕುರಿತು ನಾಗರಿಕ ಸಮಾಜ ಎಂದಿಗೂ ಯೋಚಿಸುವುದಿಲ್ಲ. ಅವರೊಂದು ರೀತಿಯಲ್ಲಿ ಅದೃಶ್ಯ ನಾಗರಿಕರಂತೆ ಇರುತ್ತಾರೆ. ಮನೆಯ ಹೊರಗೂ ಒಳಗೂ ಚಿತ್ರಹಿಂಸೆಯನ್ನೂ ಅನುಭವಿಸುತ್ತಾರೆ. ಅಂಥವರ ಪಾಲಿಗೆ ಜಿನ್ವಾರ್, ಒಂದು ಬಿಡುಗಡೆಯ ಹಾದಿಯಾಗಿದೆ' ಎಂದು ಆಕೆ ಹೇಳುತ್ತಾರೆ.

ಪುರುಷರು ಈ ಗ್ರಾಮಕ್ಕೆ ಬರಬಹುದು. ಆದರೆ, ತಂಗುವಂತಿಲ್ಲ. ಅಮ್ಮಂದಿರ ಜತೆ ಗಂಡುಮಕ್ಕಳಿಗೆ ಇರಲು ಅವಕಾಶವಿದೆ. ಆದರೆ, ಮದುವೆಯಾದೊಡನೆ ಈ ಊರಿನಿಂದ ಜಾಗ ಖಾಲಿ ಮಾಡಬೇಕು ಎನ್ನುವ ನಿಯಮ ಇಲ್ಲಿ ಜಾರಿಯಲ್ಲಿದೆ. ಬಿಡುಗಡೆಯ ಹಾದಿ ತೋರಿ, ಸ್ವತಂತ್ರವಾಗಿ ಉಸಿರಾಡುವಂತೆ ಮಾಡಿದ ರೊಕಾನ್ ಅವರ ಕುರಿತು ಊರಿನ ಮಹಿಳೆಯರೆಲ್ಲ ಕೃತಜ್ಞತಾ ಭಾವವನ್ನು ಹೊಂದಿದ್ದಾರೆ. ನಾಯಕಿಯಂತೆ ಆರಾಧಿಸುತ್ತಾರೆ. ■




Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65